1	2	3	4
9)	ಚಿಕ್ಕಮಗಳೂರು	142	155
10)	ಚಿತ್ರದುರ್ಗ	141	217
11)	ದಾವಣಗೆರೆ	82	199
12)	ದಕ್ಷಿಣ ಕನ್ನಡ	69	88
13)	ಧಾರವಾಡ	80	84
14)	ಗದಗ್	71	159
15)	ಗುಲ್ಬರ್ಗಾ	177	201
16)	ಹಾಸನ	118	162
17)	ಹಾವೇರಿ	129	199
18)	ಕೊಪ್ಪಳ	61	181
19)	ಕೊಡಗು	28	53
20)	ಕೋಲಾರ	219	265
21)	ಮಂಡ್ಯ	74	125
22)	ಮೈಸೂರು	119	177
23)	ರಾಯಚೂರು	45	69
24)	ಶಿವಮೊಗ್ಗ	142	196
25)	ತುಮಕೂರು	223	295
26)	ಉಡುಪಿ	56	167
27)	ಉತ್ತರ ಕನ್ನಡ	108	122

ಚಿತ್ರದುರ್ಗ ಜಿಲ್ಲೆಯಲ್ಲಿನ ವಿದ್ಯಾರ್ಥಿನಿಲಯಗಳಿಗೆ ಆಹಾರ ಧಾನ್ಯಗಳು ಮತ್ತು ಇತರೇ ಪದಾರ್ಥಗಳ ಸರಬರಾಜಿನ ಬಗ್ಗೆ

3092 (3460) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆಯಲ್ಲಿರುವ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆ ವತಿಯಿಂದ ನಡೆಯುತ್ತಿರುವ ಮೆಟ್ರಿಕ್ ಪೂರ್ವ ಬಾಲಕ, ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು ಟೆಂಡರ್ ಕರೆಯಲಾಗಿದೆಯೆ;

ಆ) ಹಾಗಿದ್ದರೆ, ಈ ಟೆಂಡರ್ನಲ್ಲಿ ಯಾವ ಯಾವ ಖಾಸಗಿ ಏಜೆನ್ಸಿಗಳು ಭಾಗವಹಿಸಿವೆ; ಟೆಂಡರ್ ಮೊತ್ತವೇನು;

ಇ) ಈ ಏಜೆನ್ಸಿಗಳು ಮಾರುಕಟ್ಟೆ ಬೆಲೆಗಿಂತ ಶೇ. 90 ರಷ್ಟು ಕಡಿಮೆ ಬೆಲೆಗೆ ಟೆಂಡರ್ ಹಾಕಿರುವುದು ನಿಜವೆ;

ಈ) ಈ ಟೆಂಡರ್ನಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಉ) ಬಂದಿದ್ದರೆ, ಸಂಬಂಧಿಸಿದ ಅಧಿಕಾರಿಗಳ ಮೇಲೆ ಯಾವ ಕ್ರಮಕ್ಕೆಗೊಳ್ಳಲಾಗಿದೆ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಹೌದು

ಆ) ವಿವರಗಳನ್ನು ಅನುಬಂಧ-Iರಲ್ಲಿ ನೀಡಿದೆ.

ಇ) ಸಣ್ಣ ಪ್ರಮಾಣದಲ್ಲಿ ಖರೀದಿ ಮಾಡಲಾಗುವ ಕೆಲವು ಪದಾರ್ಥಗಳಿಗೆ ಮಾರುಕಟ್ಟೆ ದರಕ್ಕಿಂತ ಶೇಕಡ 90ರಷ್ಟು ಕಡಿಮೆ ದರವನ್ನು ನಮೂದಿಸಿರುತ್ತಾರೆ.

ಈ) ಪಾರದರ್ಶಕ ನಿಯಮದ ಪ್ರಕಾರ ಟೆಂಡರ್ ಕರೆಯಲಾಗಿದೆ. ಇದರಲ್ಲಿ ಅವ್ಯವಹಾರ ನಡೆದಿರುವುದಿಲ್ಲ.

ಅನುಬಂಧ-1

ಕ್ರ. ಸಂ.	ತಾಲ್ಲೂಕಿನ ಹೆಸರು	ಟೆಂಡರ್ ಹಾಕಿದ್ದು ಏಜೆನ್ಸಿಯ ಹೆಸರು	ಟೆಂಡರ್‌ದಾರರು ನಮೂದಿಸಿರುವ ಒಟ್ಟು ಮೊತ್ತ ರೂ.ಗಳಲ್ಲಿ	ಷರಾ
1)	ಚಿತ್ರದುರ್ಗ ತಾಲ್ಲೂಕು	1) ಪಿಕಾಕ್ ಅಂಡ್ ಕಂಪನಿ, ದಾವಣಗೆರೆ	19519.55	
		2) ಜನತಾ ಬಜಾರ್ ಚಿತ್ರದುರ್ಗ	22085.70	ಕಡಿಮೆ ದರ ನಮೂದಿಸಿರುವ
		3) ಚಿತ್ರದುರ್ಗ ನಗರ ಗ್ರಾಹಕರ ಸಂಘ ನಿರ್ಮಿತ ಚಿತ್ರದುರ್ಗ	ಆದಾಯ ತೆರಿಗೆ ಪ್ರಮಾಣ ಪತ್ರ ಸಲ್ಲಿಸಿದೆ ಇರುವುದರಿಂದ ಟೆಂಡರ್ ತಿರಸ್ಕರಿಸಿದೆ.	ಪಿಕಾಕ್ ಅಂಡ್ ಕಂಪನಿ ದಾವಣಗೆರೆ ಇವರಿಗೆ ಆದೇಶ ನೀಡಿದೆ.
		4) ಲಕ್ಷ್ಮಿ ರಂಗನಾಥ ಸ್ಟೋರ್, ಚಿತ್ರದುರ್ಗ	ಇ.ಎಂ.ಡಿ. ಮೊಬಲಗನ್ನು ಸಲ್ಲಿಸಿರುವುದರಿಲ್ಲವಾದ್ದರಿಂದ ಟೆಂಡರ್ ಅರ್ಜಿಯನ್ನು ತಿರಸ್ಕರಿಸಿದೆ.	
2)	ಚಳ್ಳಕೆರೆ ತಾಲ್ಲೂಕು	1) ಪಿಕಾಕ್ ಅಂಡ್ ಕಂಪನಿ ದಾವಣಗೆರೆ	19651.00	ಕಡಿಮೆ ದರ ನಮೋದಿಸಿರುವ
		2) ಟಿ.ಎ.ಪಿ.ಸಿ.ಎಂ.ಎಸ್ ಚಳ್ಳಕೆರೆ	21507.15	ಪಿಕಾಕ್ ಅಂಡ್ ಕಂಪನಿ
		3) ನಂದಾಟ್ರೇಡರ್ಸ್ ಚಿತ್ರದುರ್ಗ	21269.75	ದಾವಣಗೆರೆ ಇವರಿಗೆ ಆದೇಶ ನೀಡಿದೆ.
3)	ಹಿರಿಯೂರು ತಾ.	1) ಟಿ.ಎ.ಪಿ.ಸಿ.ಎಂ.ಎಸ್ ಹಿರಿಯೂರು	18669.50	ಕಡಿಮೆ ದರ ನಮೂದಿಸಿರುವ
		2) ಪಿಕಾಕ್ ಅಂಡ್ ಕಂಪನಿ ದಾವಣಗೆರೆ	19301.55	ಟಿ.ಎ.ಪಿ.ಸಿ.ಎಂ.ಎಸ್
		3) ನಂದಾಟ್ರೇಡರ್ಸ್ ಚಿತ್ರದುರ್ಗ	21220.95	ಹಿರಿಯೂರು ಇವರಿಗೆ ಆದೇಶ
		4) ಜನತಾ ಬಜಾರ್ ಚಿತ್ರದುರ್ಗ	22580.10	ನೀಡಲಾಗಿದೆ.
4)	ಮೊಳಕಾಲ್ಮೂರು ತಾ:	1) ನಂದಾ ಟ್ರೇಡರ್ಸ್ ಚಿತ್ರದುರ್ಗ	21289.75	ಕಡಿಮೆ ದರ ನಮೂದಿಸಿರುವ

ಕ್ರ. ಸಂ.	ತಾಲ್ಲೂಕಿನ ಹೆಸರು	ಟೆಂಡರ್ ಹಾಕಿದ್ದು ಏಜೆನ್ಸಿಯ ಹೆಸರು	ಟೆಂಡರ್‌ದಾರರು ನಮೂದಿಸಿರುವ ಒಟ್ಟು ಮೊತ್ತ ರೂ.ಗಳಲ್ಲಿ	ಷರಾ
		2) ಟಿ.ಎ.ಪಿ.ಸಿ.ಎಂ.ಎಸ್. ಮೊಳಕಾಲ್ಮೂರು	59021.35	ನಂದಾಟ್ರೇಡರ್ಸ್ ಚಿತ್ರದುರ್ಗ ಇವರಿಗೆ ಆದೇಶ ನೀಡಲಾಗಿದೆ.
5)	ಹೊಸದುರ್ಗ ತಾಲ್ಲೂಕು	1) ಪಿಕಾಕ್ ಅಂಡ್ ಕಂಪನಿ ದಾವಣಗೆರೆ	19300.50	ಕಡಿಮೆ ದರ ನಮೂದಿಸಿರುವ
		2) ಜನತಾ ಬಜಾರ್ ಚಿತ್ರದುರ್ಗ	22922.50	ಪಿಕಾಕ್ ಅಂಡ್ ಕಂಪನಿ
		3) ಟಿ.ಎ.ಪಿ.ಎಂ.ಎಸ್. ಹೊಸದುರ್ಗ	51825.50	ದಾವಣಗೆರೆ ಇವರಿಗೆ ಆದೇಶ ನೀಡಲಾಗಿದೆ.
6)	ಹೊಳಲ್ಕೆರೆ ತಾಲ್ಲೂಕು	1) ಪಿಕಾಕ್ ಅಂಡ್ ಕಂಪನಿ ದಾವಣಗೆರೆ	19301.00	ಕಡಿಮೆ ದರ ನಮೂದಿಸಿರುವ
		2) ನಂದಾಟ್ರೇಡರ್ಸ್ ಚಿತ್ರದುರ್ಗ	21590.75	ಪಿಕಾಕ್ ಅಂಡ್ ಕಂಪನಿ
		3) ಜನತಾ ಬಜಾರ್ ಚಿತ್ರದುರ್ಗ	22654.75	ದಾವಣಗೆರೆ ಇವರಿಗೆ ಆದೇಶ
		4) ಮಂಜುನಾಥ ಪ್ರಾವಿಜನ್ ಸ್ಟೋರ್ ಚಿತ್ರದುರ್ಗ	2002–03ರ ಮಾರಾಟ ತೆರಿಗೆ ಪ್ರಮಾಣ ಪತ್ರ ಹಾಗೂ ಆರ್ಥಿಕ ಸ್ಥಿತಿಯ ಬಗ್ಗೆ ದೃಢೀಕರಣ ಪತ್ರ ಸಲ್ಲಿಸದೆ ಇರುವುದರಿಂದ ಟೆಂಡರ್ ಅರ್ಜಿಯನ್ನು ತಿರಸ್ಕರಿಸಿದೆ.	ನೀಡಲಾಗಿದೆ.

ರಾಜ್ಯದಲ್ಲಿ ಅಕ್ರಮ ಕಲ್ಲುಗಣಿಗಾರಿಕೆ

3093 (3461) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದರೆ, ಇಂತಹ ಎಷ್ಟು ಅಕ್ರಮ ಕಲ್ಲು ಗಣಿಗಾರಿಕೆಗಳನ್ನು ಪತ್ತೆ ಹಚ್ಚಲಾಗಿದೆ; ಜಿಲ್ಲಾವಾರು ವಿವರ ನೀಡುವುದು;

ಇ) ಈ ಅಕ್ರಮ ಕಲ್ಲು ಗಣಿಗಾರಿಕೆ ನಡೆಸಲು ಅಧಿಕಾರಿಗಳು ಕುಮ್ಮಕ್ಕು ನೀಡುತ್ತಿರುವುದು ನಿಜವೆ;

ಈ) ಹಾಗಿದ್ದರೆ, ಇಂತಹ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಉ) ಅಕ್ರಮ ಗಣಿಗಾರಿಕೆ ನಡೆಸುತ್ತಿರುವ ವ್ಯಕ್ತಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು):

ಅ) ಬಂದಿದೆ.

ಆ) 167 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ:–

ಕನಕಪುರ	07
ಮಂಡ್ಯ	09
ಮಂಗಳೂರು	55
ಬಿಜಾಪುರ	15
ಬಾಗಲಕೋಟೆ	11
ಚಿತ್ರದುರ್ಗ	24
ಕೋಲಾರ	09
ಶಿವಮೊಗ್ಗ	19
ಬೆಂಗಳೂರು ದಕ್ಷಿಣ	06
ಕೊಪ್ಪಳ	19

ಇ) ಇಲ್ಲ.

ಈ) ಅನ್ವಯಿಸುವುದಿಲ್ಲ

ಉ) ಅಕ್ರಮ ಗಣಿಗಾರಿಕೆ ನಡೆಸುತ್ತಿರುವ ಪ್ರದೇಶವನ್ನು ತಪಾಸಣೆ ನಡೆಸಿ ಕಲ್ಲು ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಿ ಸಕ್ರಮ ಗೊಳಿಸಲಾಗುತ್ತದೆ. ಅಲ್ಲದೆ, ಅಕ್ರಮವಾಗಿ ಅನಧಿಕೃತ ಗಣಗಾರಿಕೆಯಲ್ಲಿ ತೊಡಗಿದ ವ್ಯಕ್ತಿಗಳಿಂದ ರೂ. 40,12,521.00 ದಂಡ ಸಂಗ್ರಹಿಸಲಾಗಿದೆ ಮತ್ತು 21 ಪ್ರಕರಣಗಳಲ್ಲಿ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಕೇಸುಗಳನ್ನು ದಾಖಲಿಸಲಾಗಿರುತ್ತದೆ ಮತ್ತು ದೂರುಗಳನ್ನು ದಾಖಲಿಸಲು ಪೊಲೀಸ್ ಇಲಾಖೆಗೆ ಪತ್ರಗಳನ್ನೂ ಸಹ ಬರೆಯಲಾಗಿದೆ. ಅಲ್ಲದೆ, ಆಗಿಂದಾಗ್ಗೆ ಜಿಲ್ಲಾಧಿಕಾರಿಗಳ ಹಾಗೂ ಪೊಲೀಸ್ ಅಧಿಕಾರಿಗಳ ಗಮನಕ್ಕೆ ತಂದು ಹಾಗೂ ಅವರ ಸಹಕಾರ ಪಡೆದು ಅನಧಿಕೃತ ಗಣಿಗಾರಿಕೆಯನ್ನು ನಿಲ್ಲಿಸಲಾಗುತ್ತಿದೆ.